ತಾವೇ ರೂಪಿಸಿಕೊಳ್ಳುವ ಅಪೇಕ್ಷೆ ಬೆಳೆದವು. 'ವಸಾಹತುಶಾಹಿ' ಮನಃಸ್ಥಿತಿಯಿಂದ ತಪ್ಪಿಸಿಕೊಳ್ಳುವ ಆಸೆ ನಮ್ಮಲ್ಲಿನ ಅನೇಕ ಸಮುದಾಯಗಳು ತಮ್ಮ ತಮ್ಮ ಅಸ್ಮಿತೆಯನ್ನು ಹುಡುಕುವ ಬಗೆಯಲ್ಲಿ ವ್ಯಕ್ತವಾಯಿತು ಅನಿಸುತ್ತದೆ. ಜಾಗತಿಕವಾಗಿ 1970ರ ಸುಮಾರಿಗೆ, ಕನ್ನಡದಲ್ಲಿ ತೊಂಬತ್ತರ ದಶಕದ ಹೊತ್ತಿಗೆ 'ಅರ್ಥ'ದ ಬಗ್ಗೆ ಅನುಮಾನ, 'ಕೇಂದ್ರ'ದ ಬಗ್ಗೆ ಸಂಶಯ, ಅಂಚಿನ ಪ್ರಾಮುಖ್ಯ. ಬದಲಾಗುವ ಅರ್ಥವಂತಿಕೆ ಇತ್ಯಾದಿಗಳು ನಿರಚನಾವಾದದ ಹೆಸರಿನಲ್ಲಿ ಪರಿಚಯವಾದವು. ಅಧಿಕಾರದ ಸ್ವರೂಪ, ಪ್ರತಿಭಟನೆಯ ಜೀವಂತಿಕೆ, ವ್ಯವಸ್ಥೆಯನ್ನು ಒಪ್ಪದೆ ಇರುವುದು ಇಂಥ ವರ್ತನೆಗಳೂ ಕಂಡವು. ಅಂದರೆ ಲೋಕದ ವಾಸ್ತವ ಬದಲಾದ ಹಾಗೆ ಶಿಕ್ಷಣದ ಉದ್ದೇಶ-ಸ್ವರೂಪಗಳೂ, ಸಾಹಿತ್ಯ ಬೋಧನೆ ಮತ್ತು ಸಾಹಿತ್ಯ ವಿಮರ್ಶೆಯ ಪ್ರಾಮುಖ್ಯತೆ, ಸ್ವರೂಪಗಳೂ ಬದಲಾದವು ಅಂತಲೇ ನನಗೆ ಅನಿಸುತ್ತದೆ. ಈಗ ನಾವು ಮತ್ತೆ 'ಲಿಬರಲ್ ಹ್ಯೂಮನಿಸಂ' ಮಾದರಿಯ ಶಿಕ್ಷಣ ಮತ್ತು ವಿಮರ್ಶೆಯ ವಿಧಾನಗಳಿಗೆ ಮರಳುವುದು ಅಸಾಧ್ಯವೆನಿಸುವಷ್ಟು ಕಷ್ಟ ಅನಿಸುತ್ತದೆ.


ಚಿತ್ರ: ಅನೂಪ್ ರಾಘ್ ಟಿ.

**◆ ಕರ್ನಾಟಕದ ಮೂಲರಾಜಕಾರಣವನ್ನೇ ನಾಚಿಸುವಂತೆ ಸಾಹಿತ್ಯ ರಾಜಕಾರಣ ನಡೆಯುತ್ತಿದೆ ಅನಿಸುತ್ತದೆ. ಇದನ್ನು ಮೀರುವಲ್ಲಿ ಸಹೃದ ಓದುಗರು ಹೇಗಿರಬೇಕು?**

ಗುಂಪುಗಾರಿಕೆ ಮತ್ತು ರಾಜಕೀಯ ಎಂದು ನೀವು ಯಾವುದನ್ನು ಕರೆಯುತ್ತೀರೋ ಅದು ಇರದಿದ್ದ ಯಾವ ಕಾಲವೂ ಮನುಷ್ಯ ಚರಿತ್ರೆಯಲ್ಲಿಲ್ಲ, ಅಲ್ಲವೇ? ಅವು ಇದ್ದವು, ಇವೆ, ಇರುತ್ತವೆ ಅನ್ನುವ ಕಾರಣಕ್ಕೇನೇ ವಿಮರ್ಶಾತ್ಮಕ ನೋಟ ಮುಖ್ಯವಾಗುತ್ತದೆ, ಅಲ್ಲವೇ? ಬದುಕಿನ ಬಗ್ಗೆ ವಿಮರ್ಶಾತ್ಮಕವಾಗಿ ಇರುವುದನ್ನು ಕಲಿಸಲು ಸಾಹಿತ್ಯ ವಿಮರ್ಶೆಯೂ ಒಂದು ಮಾರ್ಗವಾಗಿತ್ತು, ಈಗ ಇಲ್ಲ ಅನಿಸುತ್ತದೆ. ಹಾಗೆ ನೋಡಿದರೆ ಸಾಹಿತ್ಯ ಚಿಂತನೆಯು ವಿವರಿಸುವ ಆದರ್ಶ ಓದುಗರ, ಸಹೃದಯರ ಲಕ್ಷಣಗಳು ಆಯಾ ಕಾಲದ 'ಆದರ್ಶವ್ಯಕ್ತಿತ್ವ'ಗಳ ಚಿತ್ರಣವೇ ಅಲ್ಲವೇ?

ನಮಗೆ ಹಿನ್ನೋಟದಲ್ಲಿ ಕಾಣುವುದೆಂದರೆ ಸಿದ್ಧಗೊಳಿಸಿದ ಮಾದರಿಯನ್ನು ಅನುಸರಿಸುವ ದೊಡ್ಡ ಗುಂಪು ಮತ್ತು ತಮ್ಮದೇ ಆದ ಮಾದರಿಯನ್ನು ನಿರ್ಮಿಸಿಕೊಳ್ಳುವ ಬಿಡಿವ್ಯಕ್ತಿಗಳು ಇರುತ್ತಾರೆ. ಹಾಗೆ ಉತ್ತಮ ಸಾಹಿತ್ಯ ಕೃತಿಯ ನಿದರ್ಶನಗಳು ಏನಿವೆ ಅವು ಗುಂಪನ್ನು ತೊರೆದ ಅನ್ವೇಷಕರು ರೂಪಿಸಿದ ಮಾದರಿಗಳಾಗಿಯೇ ಇವೆ ಅನಿಸುತ್ತದೆ.

**◆ ಈ ಒಳರಾಜಕಾರಣ ಅಂತಃಪ್ರಜ್ಞೆಯನ್ನು, ಅದರ ಭಾಗವಾದ ಎಲ್ಲವನ್ನು ಒಳಗಿನಿಂದ ಶಿಥಿಲಗೊಳಿಸುತ್ತಿದೆ. ಈ ಶಿಥಿಲಸ್ಥಿತಿ ಬದಲಾಗುತ್ತದೆಂದು ಒಂದಷ್ಟಾದರೂ ಆಶಾಭಾವನೆಯನ್ನು ಇಟ್ಟುಕೊಳ್ಳಬಹುದೆ? ಏಕೆಂದರೆ ನಮ್ಮ ತಲೆಮಾರು ಅಸಾಧ್ಯವಾದ ಶಿಥಿಲತೆಯನ್ನು ಕಾಣುತ್ತಿದೆ.**

ಇತ್ತೀಚೆಗೆ 'ಡೆತ್ ಆಫ್ ಯೂನಿವರ್ಸಿಟಿ' ಅನ್ನುವ ಪುಸ್ತಕ ನೋಡುತ್ತಿದ್ದೆ. ಬಂಡವಾಳಶಾಹಿಯೇ ಮೇಲುಗೈಯನ್ನು ಸಾಧಿಸಿ ರಾಜಕೀಯ ಮತ್ತು ಸಮಾಜವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಾಗ ವಿಶ್ವವಿದ್ಯಾಲಯಗಳು ಮಾತ್ರವಲ್ಲ, ಎಲ್ಲ ಸಾಮಾಜಿಕ, ಆಡಳಿತಾತ್ಮಕ 'ಸಂಸ್ಥೆ'ಗಳೂ ಶಿಥಿಲವಾಗುತ್ತವೆ. ಸತ್ವಕ್ಕಿಂತ ತೋರಿಕೆ, ಬಾಲಬಡುಕತನ, ಭ್ರಷ್ಟತೆ